ಓ .ಎಸ್ . ನಂ.103/2019 ಪಿಡಬ್ಲ್ಯೂ 01

ದಿನಾಂಕ 25.09.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಎ.ಆರ್.ಕೆ 2ನೇ ಪ್ರತಿವಾದಿ ಪರ ವಕೀಲರಿಂದಃ

ನಾನು ಜೂನ್ 1989ನೇ ಸಾಲಿನಿಂದ ಎಲ್.ಐ.ಸಿ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ನಾನು ಕೆಲಸಕ್ಕೆ ಸೇರಿದಾಗಿನಿಂದ ಖಾಯಂ ಉದ್ಯೋಗಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಆದಾಯ ತೆರಿಗೆಯನ್ನು ಪಾವತಿಸುತ್ತಿದ್ದೇನು. ನಾನು ಈಗಲು ಸಹ ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿದ್ದೇನೆ. ನಾನು ನಮ್ಮ ಇಲಾಖೆಗೆ ಪ್ರತೀ ವರ್ಷದಂತೆ Performance Report ಸಲ್ಲಿಸುತ್ತಿದ್ದೇನೆ. ನನ್ನ ಆದಾಯ ತೆರಿಗೆಯೊಂದಿಗೆ ಹಾಗೂ Performance Report ನಲ್ಲಿ ನನ್ನ ಸ್ವಯಾರ್ಜಿತ ಆಸ್ತಿಗಳನ್ನು ಮಾತ್ರ ನಮೂದಿಸಿರುತ್ತೇನೆ. ದಾವಾಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ಅವುಗಳನ್ನು ನಾನು ನಮೂದಿಸಿರುವುದಿಲ್ಲ. ನನ್ನ ಆದಾಯ ತೆರಿಗೆ ವರದಿ ಹಾಗೂ Performance Report ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುತ್ತದೆಯೇ ಎಂದರೆ ಆದಾಯ ತೆರಿಗೆ ವರದಿಯನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಆದರೇ Performance Report ಸಲ್ಲಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನ್ಯಾಯಾಲಯದ ಮುಖಾಂತರ ಅರ್ಜಿ ಸಲ್ಲಿಸಿ ನನ್ನ Performance Report ನ್ನು ಇಲಾಖೆಯಿಂದ ಪಡೆದುಕೊಳ್ಳಲು ನನ್ನ ಆಕ್ಷೇಪಣೆ ಇರುವುದಿಲ್ಲ.

ದಾವಾ ಎ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ನಮ್ಮ ತಂದೆಯವರಿಗೆ ನಾನು ಹಣ ನೀಡಿರುತ್ತೇನೆಂದು ಸಾಬೀತು ಪಡಿಸಲು ನನ್ನ ಬಳಿ ಯಾವುದೇ ದಾಖಲೆಗಳಿರುವುದಿಲ್ಲ. ನನ್ನ ಹೆಸರಿನಲ್ಲಿ ನನ್ನ ಹೆಂಡತಿ ಹೆಸರಿನಲ್ಲಿ ಹಾಗೂ 2ನೇ ಪ್ರತಿವಾದಿಯ ಹೆಸರಿನಲ್ಲಿರುವ ದಾವಾ ಸ್ವತ್ತುಗಳನ್ನು

ಒಳಗೊಂಡು ಎಲ್ಲ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಹೆಂಡತಿಯ ಹೆಸರಿನಲ್ಲಿರುವ ಸ್ವತ್ತುಗಳಲ್ಲಿ ಪ್ರತಿವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಎ ಸ್ವತ್ತು ನಮ್ಮ ತಂದೆಯ ಹೆಸರಿಗೆ ಕ್ರಯವಾಗಿರುವ ಆಸ್ತಿ ಹಾಗೂ ದಾವಾ ಬಿ ಸ್ವತ್ತು ಸರ್ಕಾರದಿಂದ ನಮ್ಮ ತಂದೆಯವರ ಹೆಸರಿಗೆ ಮಂಜೂರಾಗಿರುವ ಆಸ್ತಿ ಎಂದರೆ ಸರಿ. ನಮ್ಮ ತಂದೆಯವರು ದಾವಾ ಸ್ವತ್ತುಗಳನ್ನು ನೋಂದಾಯಿತ ಮರಣ ಶಾಸನ ಪತ್ರದ ಮುಖಾಂತರ 2ನೇ ಪ್ರತಿವಾದಿಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಹೆಂಡತಿಯ ಹೆಸರಿನಲ್ಲಿರುವ ಆಸ್ತಿಗಳು ಹಾಗೂ ದಾವಾಸ್ತಿಗಳನ್ನು ಒಳಗೊಂಡು ನಾನು ಮತ್ತು ಪ್ರತಿವಾದಿಗಳು ಸಮನಾಗಿ ವಿಭಾಗ ಮಾಡಿಕೊಳ್ಳಲು ನನ್ನ ಆಕ್ಷೇಪಣೆ ಇರುತ್ತದೆ. ಸಾಕ್ಷಿ ಮುಂದುವರೆದು ನನ್ನ ಹಾಗೂ ನನ್ನ ಹೆಂಡತಿ ಹೆಸರಿನಲ್ಲಿರುವ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ.

ನನ್ನ ಹೆಂಡತಿ ಗೃಹಿಣಿಯಾಗಿರುತ್ತಾರೆ. ನಾವು ವಿವಾಹವಾಗಿ ಸುಮಾರು 33 ವರ್ಷ ಆಗಿರುತ್ತದೆ. ನನ್ನ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಸ್ವತ್ತುಗಳನ್ನು ಖರೀದಿಸುವ ಸಮಯದಲ್ಲಿ ನನ್ನ ಹೆಂಡತಿಗೆ ಯಾವುದೇ ಸ್ವಂತ ಆದಾಯ ಇರುವುದಿಲ್ಲ ಎಂದರೆ ಅವರಿಗೆ ಅವರ ತವರು ಮನೆಯಿಂದ ಸ್ವಲ್ಪ ಹಣ ನೀಡಿರುತ್ತಾರೆಂದು ನುಡಿಯುತ್ತಾರೆ. ನಾವು ಸ್ವತ್ತುಗಳನ್ನು ಖರೀದಿಸುವ ಸಮಯದಲ್ಲಿ ನನ್ನ ಹೆಂಡತಿಗೆ ಅವರ ತವರು ಮನೆಯವರು ಹಣ ನೀಡಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳಿರುವುದಿಲ್ಲ. ನನ್ನ ಮಾವನವರಿಗೆ ಒಟ್ಟು 08 ಜನ ಹೆಣ್ಣು ಮಕ್ಕಳಿರುತ್ತಾರೆ. ನನ್ನ ಮಾವ ನವರು ಡೆಪ್ಯೂಟಿ ಪೋಸ್ಟ್ ಮಾಸ್ಟರ್ ಆಗಿ ಖಾಯಂ ಉದ್ಯೋಗಿಯಾಗಿ ಕೆಲಸ ಮಾಡುತ್ತಿದ್ದರು. ನನ್ನ ಶ್ರೀಮತಿಯವರಿಗೆ ಹಣ ನೀಡಿದ ಸಂದರ್ಭದಲ್ಲಿ ನಮ್ಮ ಮಾವನವರಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು

ಹೇಳಲು ನನಗೆ ಆಗುವುದಿಲ್ಲ.

ನನ್ನ ತಂಗಿ 5ನೇ ಪ್ರತಿವಾದಿರವರಿಗೆ ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂಗಿಗೆ ಮದುವೆಯಾದಾಗ ನಾನು ಯಾವುದೇ ಉದ್ಯೋಗದಲ್ಲಿರಲಿಲ್ಲ ಎಂದರೆ ಸರಿ. ನನ್ನ ಹಾಗೂ 5ನೇ ಪ್ರತಿವಾದಿಯ ಮದುವೆಗಳನ್ನು 1ನೇ ಪ್ರತಿವಾದಿ ಹಾಗೂ ನನ್ನ ತಂದೆಯವರು ನೆರವೇರಿಸುತ್ತಾರೆ ಎಂದರೆ ಸರಿ. ನಾನು ಸುಳ್ಳು ಸಂಗತಿಗಳನ್ನು ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರು ನನ್ನ ಹೆಸರಿನಲ್ಲಿರುವ ಆಸ್ತಿಗಳಲ್ಲಿ ಭಾಗ ನೀಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾಸ್ವತ್ತುಗಳಗೆ ಸಂಬಂಧಿಸಿದಂತೆ ನನ್ನ ತಂದೆಯವರು ಮರಣ ಶಾಸನ ಪತ್ರ ಬರೆಯುವ ಸಮಯದಲ್ಲಾಗಲಿ ಅಥವಾ ಅವರ ಮರಣದ ನಂತರ ಸದರಿ ಮರಣ ಶಾಸನ ಪತ್ರವನ್ನು ಅನುಸರಿಸಿ 2ನೇ ಪ್ರತಿವಾದಿ ಖಾತೆ ಬದಲಾಯಿಸಿಕೊಂಡ ಸಂದರ್ಭದಲ್ಲಿ ಆಕ್ಷೇಪಣೆ ಸಲ್ಲಿಸಲು ನನಗೆ ಯಾವುದಾದರು ತೊಂದರೇ ಇರುತ್ತೆದೆಯೆ ಎಂದರೆ ಸಾಕ್ಷಿಯು ಸದರಿ ವಿಷಯವು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು 2ನೇ ಪ್ರತಿವಾದಿಯವರಿಗೆ ಬರೆದಿರುವ ಮರಣ ಶಾಸನ ಪತ್ರದ ಬಗ್ಗೆ ಈ ದಾವೆಯನ್ನು ಸಲ್ಲಿಸಿದ ನಂತರ ನನ್ನ ಗಮನಕ್ಕೆ ಬಂದಿರುತ್ತದೆ. ಸದರಿ ಮರಣ ಶಾಸನ ಪತ್ರದ ಬಗ್ಗೆ ನನಗೆ ತಿಳಿದ ನಂತರ ಸದರಿ ಮರಣ ಶಾಸನ ಪತ್ರವನುನ ಊರ್ಜಿತವಲ್ಲ ಎಂದು ಪ್ರಶ್ನಿಸಿ ಪರಿಹಾರ ಕೇಳಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಓ .ಎಸ್ . ನಂ.103/2019 ಪಿಡಬ್ಲ್ಯೂ: 01

ನಾನು ನನ್ನ ವಿದ್ಯಾಭ್ಯಾಸದ ಸಮಯದಲ್ಲಿ ಯಾವುದೇ ಹಾಸ್ಟಲ್ ಅಥವಾ ಬೋರ್ಡಿಂಗ್ ಶಾಲೆಯಲ್ಲಿ ಇರಲಿಲ್ಲ. ನಾನು ನನ್ನ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ